**O.S 2/2023**

P.W.1

ಸಾಕ್ಷಿಯನ್ನು ದಿಃ 13-11-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ </u> ಶ್ರೀ ಕೆ ಎಂ ಎನ್ 3 ಮತ್ತು 4 ಪ್ರತಿವಾದಿ ಪರ ವಕೀಲರಿಂದ

1) ನಮ್ಮ ಮನೆತನಕ್ಕೆ ಒಟ್ಟು 12 ಎಕರೆ 16 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳನ್ನು ಹೊರತುಪಡಿಸಿ ನಮ್ಮ ಕುಟುಂಬ ಬೇರೆ ಎಲ್ಲಿಯಾ ಜಮೀನುಗಳು ಇರುವುದಿಲ್ಲ. ದಾವಾ ಆಸ್ತಿಗಳು ಭೂ ನ್ಯಾಯಮಂಡಳಿ ಆದೇಶದ ಪ್ರಕಾರ ಗುರುಪಾದಪ್ಪ ಜಂಬಗಿಯವರಿಗೆ 2004 ರಲ್ಲಿ ಬಂದಿರುತ್ತದೆ ಎಂದರೆ ಸರಿ. ಗುರುಪಾದಪ್ಪ ಜಂಬಗಿಯವರಿಗೆ ಚಂದ್ರವ್ವ ಎಂಬ ಹೆಣ್ಣು ಮಗಳು ಇರುತ್ತಾಳೆ. ಚಂದ್ರವ್ವಳಿಗೆ ಗಂಗವ್ವ ಮಗಳಿದ್ದು ಪ್ರತಿವಾದಿ 3 ಮತ್ತು 4 ಅವರ ಮಕ್ಕಳಿರುತ್ತಾರೆ ಎಂದರೆ ಸರಿ. ಗುರುಪಾದಪ್ಪನಿಗೆ ಸೋಲಬಪ್ಪ ಎಂಬ ಸಹೋದರ ಇದ್ದ ಎಂದರೆ ಸರಿ. ಸೋಲಬಪ್ಪನ ಮೊಮ್ಮಕ್ಕಳಾದ ನಿಂಗಪ್ಪ ರುದಪ್ಪ ಮತ್ತು ಮಲ್ಲೇಶಪ್ಪ ಇರುತ್ತಾರೆಂದರೆ ಸರಿ. ಸದರಿ ಮಲ್ಲೇಶಪ್ಪ ಈ ದಾವೆಯಲ್ಲಿ 4 ನೇ ವಾದಿಯಾಗಿರುತ್ತಾರೆಂದರೆ ಸರಿ. ನಾನು ನಿಂಗಪ್ಪನ ಮಗನಿರುತ್ತೇನೆ. ಬಸಮ್ಮ ರುದ್ರಪ್ಪನ ಹೆಂಡತಿ ಇರುತ್ತಾಳೆ. 1 ನೇ ವಾದಿ ನನ್ನ ತಾಯಿ ಇರುತ್ತಾಳೆ. ಈ ದಾವೆಯಲ್ಲಿ ನನಗೆ ಮತ್ತು 3 ಮತ್ತು 4 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಯಲ್ಲಿ ಸಮನಾದ ಹಕ್ಕು ಇರುತ್ತದೆ ಎಂದರೆ ಸರಿ. ವಾದಿ ಹಾಗೂ 3 ಮತ್ತು 4 ನೇ ಪ್ರತಿವಾದಿಯವರಿಗೆ ಮತ್ತು 1 ಮತ್ತು 2 ಪ್ರತಿವಾದಿಯರಿಗೆ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ದಾವಾ ಆಸ್ತಿಗೆ ಮತ್ತು ಹಾಗೂ 1 ಮತ್ತು 2 ಪ್ರತಿವಾದಿಯರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ ಅಲ್ಲ. 1 ಮತ್ತು 2 ಪ್ರತಿವಾದಿಯರು ಪಾಲು ವಿಭಾಗದಲ್ಲಿ ತಮ್ಮ ಹೆಸರನ್ನು ದಾವಾ ಆಸ್ತಿಯ ಕಂದಾಯ ದಾಖಲೆಗಳಲ್ಲಿ ದಾಖಲಿಸಿಕೊಂಡಿರುತ್ತಾರೆ. ಎಂ ಇ ನಂಬರ 1263 ನ್ನು ಕಾನೂನಬಾಹಿರವಾಗಿ 1 ಮತ್ತು 2 ನೇ ಪ್ರತಿವಾದಿಗಳು ದಾಖಲಿಸಿಕೊಂಡಿರುತ್ತಾರೆ ಸರಿ. 3 ಮತ್ತು 4 ನೇ ಪ್ರತಿವಾದಿಗಳಿಗೆ ದಾವಾ ಆಸ್ತಿಯಲ್ಲ ಹಕ್ಕು, ಅಧಿಕಾರ ಇದ್ದರೂ ಉದ್ದೇಶಪೂರ್ವಕವಾಗಿ ಅವರ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತೇವೆಂದರೆ ಸರಿ ಅಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ ಕಾರಣ ಪಾಟೀ ಸವಾಲು ಮುಂದೂಡಲಾಯಿತು.)**

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಸಾಕ್ಷಿದಾರರ ಸಹಿಃ

ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ